# ವೈರಾಗ್ಯಮೂರ್ತಿ
# ಶ್ರೀ ವಿದ್ಯಾಸಿಂಧುತೀರ್ಥಶ್ರೀಪಾದರ
# ಮಂತ್ರಾಕ್ಷತೆಗಳ ಮಹಾಮಹಿಮೆ

ಶ್ರೀಮದ್ ವ್ಯಾಸರಾಜಸಂಸ್ಥಾನದ ಪರಂಪರೆಯಲ್ಲಿ ಶ್ರೀ ವಿದ್ಯಾಸಿಂಧುತೀರ್ಥಶ್ರೀಪಾದರ ಕಾಲ ಅನೇಕ ದೃಷ್ಟಿಗಳಿಂದ ಮಹತ್ತ್ವದ್ದು. 1877-78ರ ಘೋರ ಕ್ಷಾಮಕಾಲದಲ್ಲಿ ಶ್ರೀಮಠದ ಸುಮಾರು ಒಂದು ಸಾವಿರ ಕೇಜಿಗೂ ಮಿಗಿಲಾದ ಬಂಗಾರವನ್ನು ಮಾರಿ, ಸಾಲದು ಎಂದು ಸಾಲವನ್ನೂ ಮಾಡಿ ಧಾನ್ಯಗಳನ್ನು ಖರೀದಿಸಿ ಲಕ್ಷಲಕ್ಷ ಮಂದಿಯನ್ನು ಒಂದೂವರೆ ವರ್ಷಗಳ ಕಾಲ ಸಾಕಿ ಬದುಕಿಸಿದ ಮಹಾನುಭಾವರು. ಅಕ್ಕಿಬೇಳೆ ಸ್ವಾಮಿಗಳು ಎಂದೇ ಮೈಸೂರಿನ ಪ್ರಾಂತದಲ್ಲಿ ಪ್ರಸಿದ್ಧರಾದವರು.

ಪೂರ್ಣಯ್ಯನವರು ಶ್ರೀಮಠಕ್ಕೆ ಭೂರಿ ಸಂಪತ್ತನ್ನು ದಾನ ನೀಡಿದಾಗ ಶ್ರೀ ವಿದ್ಯಾವಲ್ಲಭತೀರ್ಥ ಶ್ರೀಪಾದರು ಭವಿಷ್ಯ ನುಡಿದಿರುತ್ತಾರೆ – ನಮ್ಮ

ಪರಂಪರೆಯಲ್ಲಿ ಬರುವ ಶ್ರೀ ವಿದ್ಯಾಸಿಂಧುತೀರ್ಥರ ಕಾಲದಲ್ಲಿ ನೀವು ನೀಡಿದ ಬಂಗಾರವೆಲ್ಲ ಧಾನ್ಯವಾಗುತ್ತದೆ. ಆ ಪುಣ್ಯ ನಿಮಗೊದಗುತ್ತದೆ. **ಧನ್ಯಂ ಕರೋತಿ ತ್ವಾಂ ಸಿಂಧುಃ ಧಾನ್ಯೀಕೃತ್ಯ ಹಿರಣ್ಯಕಮ್** ಎಂದು.

ಶ್ರೀ ವಿದ್ಯಾಸಿಂಧುತೀರ್ಥರ ಅವತಾರವಾದದ್ದೇ ಇದೇ ಕಾರಣಕ್ಕಾಗಿ. ವೈರಾಗ್ಯ, ನಿಸ್ಪೃಹತೆ, ದೀನವಾತ್ಸಲ್ಯ, ಕಾರುಣ್ಯ ಅವರ ಜನ್ಮಜಾತ ಗುಣಗಳಾಗಿದ್ದವು. ವರಸೆಯಲ್ಲಿ ತಮ್ಮ ತಾತಂದಿರಾದ ಶ್ರೀ ವಿದ್ಯಾಪೂರ್ಣತೀರ್ಥ ಶ್ರೀಪಾದರಿಂದಲೇ ವಿದ್ಯೆಯನ್ನು ಪಡೆದಿದ್ದ ಮಹಾಮೇಧಾವಿ ಪುರುಷರು. ಅವರ ವಿದ್ಯೆ, ತಪಸ್ಸು, ಯೋಗಶಕ್ತಿ,  ಪಾಂಡಿತ್ಯಗಳಿಗೆ ಸಾಕ್ಷಿಯಾದ ಅನೇಕ ಘಟನೆಗಳನ್ನು ಗುರುಮಾಹಾತ್ಮ್ಯಮಂಜರೀ ದಾಖಲಿಸುತ್ತದೆ.

ಆದರೆ ಅವರ ಆರಾಧನೆಯ ಈ ಪವಿತ್ರ ಸಂದರ್ಭದಲ್ಲಿ ಪೂರ್ವಾಶ್ರಮದೊಂದಿಗೆ ಅವರು ಯಾವ ರೀತಿ ವ್ಯವಹರಿಸುತ್ತಿದ್ದರು ಎನ್ನುವದನ್ನು ತಿಳಿಯೋಣ. ಸಂನ್ಯಾಸ ಸ್ವೀಕರಿಸಲಿರುವ,

ಅದರಲ್ಲಿಯೂ ಪೀಠಾಧಿಪತಿಗಳಾಗುವ ವ್ಯಕ್ತಿಯಲ್ಲಿ ಇರಬೇಕಾದ ಮಹಾಸದ್ಗುಣದ ಕುರಿತು ತಿಳಿಯೋಣ.

ಶ್ರೀ ವಿದ್ಯಾಸಿಂಧುತೀರ್ಥರು ಶ್ರೀ ಲಕ್ಷ್ಮೀನಾಥತೀರ್ಥರ ಪರಮಾನುಗ್ರಹಕ್ಕೆ ಪಾತ್ರವಾದ, ಶ್ರೀ ರಘುನಾಥತೀರ್ಥರ ಮಹತ್ತರ ಆಶೀರ್ವಾದವನ್ನು ಪಡೆದ ಶೌನಕಗೋತ್ರದ ರಥಾಂಗಪುರಂ ಮನೆತನಕ್ಕೆ ಸೇರಿದವರು. ನಮ್ಮ ಶ್ರೀಮದ್ ವ್ಯಾಸರಾಜಸಂಸ್ಥಾನಕ್ಕೆ ಈ ಶ್ರೇಷ್ಠ ವಂಶದಿಂದ ಸಂದಿರುವಷ್ಟು ಸೇವೆ ಬೇರೆ ಯಾವ ವಂಶದವರಿಂದಲೂ ಸಂದಿಲ್ಲ. ಶ್ರೀ ಶೇಷಚಂದ್ರಿಕಾಚಾರ್ಯರಿಂದ ಆರಂಭಿಸಿ ಶ್ರೀ ವಿದ್ಯಾಸಮುದ್ರತೀರ್ಥಶ್ರೀಪಾಂದಗಳವರೆಗೆ ಎಂಟು ಜನ ಮಹಾನುಭಾವರು — ಯಾರೂ ಮಾಡದ ಕಾರ್ಯವನ್ನು ಮಾಡಿಹೋದವರು — ಈ ವಂಶಕ್ಕೆ ಸೇರಿದವರೇ.

ಒಂದೇ ಮನೆತನಕ್ಕೆ ಸೇರಿದ್ದರೂ ಸಹಿತ ಎಂದಿಗೂ ಇವರ ಯಾವ ಪೂರ್ವಾಶ್ರಮದವರೂ ಶ್ರೀಮಠದ ಮೇಲೆ ಅಧಿಕಾರವನ್ನು ಚಲಾಯಿಸಲು ಬಿಡಲಿಲ್ಲ.

ಅದಕ್ಕೆ ಜ್ವಲಂತ ದೃಷ್ಟಾಂತ ಶ್ರೀ ವಿದ್ಯಾಸಿಂಧುತೀರ್ಥಶ್ರೀಪಾದರು.

(ಮುಂದೆ ಬರೆಯುವ ಎಲ್ಲ ಘಟನೆಯನ್ನು ಶ್ರೀ ವಿದ್ಯಾಸಿಂಧುತೀರ್ಥರ ಪೂರ್ವಾಶ್ರಮದ ಮರಿಮಕ್ಕಳಿಂದಲೇ ಕೇಳಿ ಬರೆದಿರುವದು. ಒಂದು ತಿಂಗಳ ಹಿಂದೆ ಮೈಸೂರಿನಲ್ಲಿರುವ ಶ್ರೀ ಪಟ್ಟಾಭಿರಾಮಾಚಾರ್ಯರ (ಶ್ರೀ ವಿದ್ಯಾಸಿಂಧುತೀರ್ಥರ ಪೂರ್ವಾಶ್ರಮದ ಪುತ್ರರು) ಮನೆಗೆ ಭೇಟಿ ನೀಡಿದ್ದೆ. ನನ್ನ ಜೀವನದಲ್ಲಿಯೇ ಮರೆಯಲಾಗದ ಅದ್ಭುತ ಅನುಭವವನ್ನು ಪಡೆದು ಐತಿಹಾಸಿಕ ವಿಷಯಗಳನ್ನು ಕೇಳಿ ಬಂದೆ)

ಇವರ ಪೂರ್ವಾಶ್ರಮದ ಹೆಸರು ಶ್ರೀ ಕೃಷ್ಣಾಚಾರ್ಯರು ಎಂದು. ಸಂನ್ಯಾಸ ಸ್ವೀಕರಿಸುವ ಸಂದರ್ಭದಲ್ಲಿ ಇವರಿಗೆ ರುಕ್ಮಿಣಿಯಮ್ಮ, ಸತ್ಯಭಾಮಮ್ಮ, ಮತ್ತು ಐದು ವರ್ಷದ ಪಟ್ಟಾಭಿರಾಮ ಎಂಬ ಮಗ ಇರುತ್ತಾರೆ. ಶ್ರೀ ವಿದ್ಯಾಪೂರ್ಣರು ಕೃಷ್ಣಾಚಾರ್ಯರನ್ನು ಕರೆದು ನೀವು ಸಂನ್ಯಾಸವನ್ನು ಸ್ವೀಕರಿಸಬೇಕು ಎಂದು ಆದೇಶಿಸುತ್ತಾರೆ. ಮರು ಮಾತಾಡದೆ

ಶ್ರೀಕೃಷ್ಣಾಚಾರ್ಯರು ಸಂನ್ಯಾಸವನ್ನು ಸ್ವೀಕರಿಸುತ್ತಾರೆ.

ಸಂನ್ಯಾಸ ಸ್ವೀಕಾರವಾದ ನಂತರ ಅವರ ಪೂರ್ವಾಶ್ರಮದ ಬಂಧುಗಳು ಬಂದು ಹೇಳುತ್ತಾರೆ — ಇಷ್ಟು ಸಣ್ಣ ಮಕ್ಕಳನ್ನು ಬಿಟ್ಟು ಸಂನ್ಯಾಸವನ್ನು ಸ್ವೀಕರಿಸಿದ್ದು ತರವಲ್ಲ. ಏನಾದರೂ ವ್ಯವಸ್ಥೆ ಮಾಡಬೇಕು ಎಂದು.

ಪೀಠದಲ್ಲಿ ಕುಳಿತಿದ್ದ ಶ್ರೀ ವಿದ್ಯಾಸಿಂಧುತೀರ್ಥರು ಅಕ್ಷರಶಃ ಗುಡುಗಿದರಂತೆ — **ಮೂಲಗೋಪಾಲಕೃಷ್ಣನ ಆಸ್ತಿಯ ಮೇಲೆ ಕಣ್ಣು ಹಾಕುತ್ತಿದ್ದೀರೇನು ಶ್ರೀಮಠದಿಂದ ಏನನ್ನೂ ನೀಡುವದಿಲ್ಲ** ಎಂದು.

ಬಂಧುಗಳು ಕ್ಷಮಾಪಣೆ ಕೇಳಿದ ಬಳಿದ ಶ್ರೀಗಳು ಹೇಳುತ್ತಾರೆ — ಅವನಿಗೆ (ತಮ್ಮ ಪೂರ್ವಾಶ್ರಮದ ಮಗ, ಐದು ವರ್ಷದ ಪಟ್ಟಾಭಿರಾಮನಿಗೆ) ಬದುಕುವ ಶಕ್ತಿಯಿದೆ. ಯಾರ ಹಣವೂ ಅವನಿಗೆ ಬೇಕಾಗಿಲ್ಲ. ಚಿಂತಿಸಬೇಡಿ ಎಂದು.

ಆ ನಂತರ ಆ ಪುಟ್ಟ ಕೂಸನ್ನು ಕರೆಯಿಸಿ ಅದರ ಕೈತುಂಬ ಮಂತ್ರಾಕ್ಷತೆಯನ್ನು ನೀಡುತ್ತಾರೆ. ಶ್ರೀಮದ್ ವ್ಯಾಸರಾಜಸಂಸ್ಥಾನದಲ್ಲಿ ಸಂಪತ್ತು ತುಂಬಿ ತುಳುಕಾಡುತ್ತಿದ್ದ ಸಮಯವದು. ಆಗ ಇದ್ದ ಬಂಗಾರದ ಮಂಟಪವನ್ನು ಹೊರಲು ಕನಿಷ್ಠ ಹತ್ತು ಜನ ಬೇಕಾಗಿತ್ತು. ಲೆಕ್ಕವಿಲ್ಲದಷ್ಟು ಆಸ್ತಿ. ಸಂನ್ಯಾಸವನ್ನೂ ತಾವು ಬೇಡಿ ಪಡೆದಿದ್ದಲ್ಲ, ಶ್ರೀಗುರುಗಳು ಅನುಗ್ರಹಿಸಿ ನೀಡಿದ್ದು. ಮಠದ ಮೇಲೆ ಪೂರ್ಣ ಅಧಿಕಾರವಿದೆ. ಇಷ್ಟಾದರೂ ತಮ್ಮ ಪೂರ್ವಾಶ್ರಮದ ಮಗನಿಗೆ ಒಂದು ಬಿಡಿಗಾಸು ನೀಡದ ವಿರಕ್ತರು ಶ್ರೀವಿದ್ಯಾಸಿಂಧುತೀರ್ಥರು. ಪುಟ್ಟ ಪಟ್ಟಾಭಿರಾಮನಿಗೆ ಕೈತುಂಬ ಮಂತ್ರಾಕ್ಷತೆ ನೀಡಿ, ತಲೆಯ ಮೇಲೆ ಕೈಯನ್ನಿಟ್ಟು ಅಶೀರ್ವದಿಸಿ ಕಳುಹಿಸಿಬಿಡುತ್ತಾರೆ. ಆ ನಂತರ ನಡೆಯುವದು ಮಾತ್ರ ಇತಿಹಾಸ. ಎರಡೂ ಕಡೆ, ಶ್ರೀಮಠದಲ್ಲಿ ಮತ್ತು ಶ್ರೀ ಪಟ್ಟಾಭಿರಾಮಾಚಾರ್ಯರ ಜೀವನದಲ್ಲಿ.

ಶ್ರೀ ವಿದ್ಯಾಸಿಂಧುತೀರ್ಥರು ಪಟ್ಟಕ್ಕೆ ಬಂದ ಐದೇ ವರ್ಷಗಳಲ್ಲಿ ಘೋರ ಕ್ಷಾಮ ತಲೆದೋರುತ್ತದೆ. ಸ್ವಾಮಿಗಳು ಶ್ರೀಮಠದಲ್ಲಿದ್ದ ಎಲ್ಲವನ್ನೂ ನೀಡಿ ಪ್ರಾಂತಕ್ಕೆ ಪ್ರಾಂತವನ್ನು ಕಾಪಾಡಿಬಿಡುತ್ತಾರೆ.

ಅದಕ್ಕಾಗಿಯೇ ಅವತರಿಸಿ ಬಂದಿದ್ದವರು. ಆ ಕಾರ್ಯಕ್ಕಾಗಿಯೇ ಗುರುಗಳಿಂದ ನಿಯುಕ್ತರಾಗಿದ್ದವರು. ಹೀಗೆ ಶ್ರೀಮಠದಲ್ಲಿದ್ದ ಸಾವಿರ ಕೋಟಿಗೂ ಮಿಗಿಲಾದ ಸುವರ್ಣ ಸಂಪತ್ತನ್ನು ಮಾರಿ ಬಡಬಗ್ಗರನ್ನು ಬದುಕಿಸಿದ ಶ್ರೀ ವಿದ್ಯಾಸಿಂಧುತೀರ್ಥರು ತಮ್ಮ ಪೂರ್ವಾಶ್ರಮದ ಮನೆಯವರಿಗೆ ಮಕ್ಕಳಿಗೆ ಮಾತ್ರ ಬಿಡಿಗಾಸನ್ನೂ ನೀಡುವದಿಲ್ಲ. ಆದರೆ ಅನುಗ್ರಹದ ಮಹಾಪೂರವನ್ನೇ ಹರಿಸುತ್ತಾರೆ.

ಸ್ವಾಮಿಗಳ ಸಂನ್ಯಾಸವಾಗುತ್ತಿದ್ದಂತೆ ಪೂರ್ವಾಶ್ರಮದವರೆಲ್ಲ ಸೋಸಲೆಯನ್ನು ಬಿಟ್ಟು ಹೊರಡುತ್ತಾರೆ. **(ಈ ವಿಚಾರವೇ ಎಷ್ಟು ಪರಿಶುಭ್ರ ನೋಡಿ, ಪೂರ್ವಾಶ್ರಮದವರು ಮಠ ಸೇರಿದ್ದಲ್ಲ, ಸ್ವಾಮಿಗಳಿರುವ ಊರನ್ನೇ ಬಿಟ್ಟು ಹೊರಟದ್ದು)** ಶ್ರೀ ಭೀಮಸೇನಾಚಾರ್ಯರ ನೇತೃತ್ವದಲ್ಲಿ ಶ್ರೀಮದ್ ವ್ಯಾಸರಾಜ ವಿದ್ಯಾಪೀಠ ನಡೆಯುತ್ತಿದ್ದ ಕಾಲವದು. (ವಿದ್ಯಾಪೀಠ ಎನ್ನುವ ಹೆಸರು ಸಹಿತ ವಿದ್ಯಾಮಠವಾದ ಶ್ರೀಮದ್ ವ್ಯಾಸರಾಜಸಂಸ್ಥಾನದ ಕೊಡುಗೆ. ಶ್ರೀವಿದ್ಯಾಕಾಂತತೀರ್ಥರ ಕಾಲದಲ್ಲಿಯೇ ಆರಂಭವಾಗಿದ್ದ ವಿದ್ಯಾಪೀಠ. ಮುಂದೆ

ವಿದ್ಯಾಶ್ರೀಧರತೀರ್ಥರು ಎಂಬ ಹೆಸರಿನಿಂದ ಪೀಠವನ್ನು ಅಲಂಕರಿಸಿದ ವಿದ್ವದ್ವರೇಣ್ಯ ಶ್ರೀ ಭೀಮಸೇನಾಚಾರ್ಯರ ನೇತೃತ್ವದಲ್ಲಿ ಸುವರ್ಣಕಾಲವನ್ನು ಕಂಡ ವಿದ್ಯಾಪೀಠವದು. ಶ್ರೀ ವಿದ್ಯಾಸಮುದ್ರತೀರ್ಥರು, ಶ್ರೀ ವಿದ್ಯಾರತ್ನಾಕರತೀರ್ಥರು ಈ ವಿದ್ಯಾಪೀಠದಿಂದ ನಿರ್ಮಾಣವಾದ ಮಹಾನುಭಾವರು) ಹೀಗಾಗಿ ಪಟ್ಟಾಭಿರಾಮಾಚಾರ್ಯರ ವಿದ್ಯಾರ್ಜನೆಗೆ ಸಮಸ್ಯೆ ಆಗುವದಿಲ್ಲ.

ಶ್ರೀ ಪಟ್ಟಾಭಿರಾಮಾಚಾರ್ಯರು ಇನ್ನೂ ಹತ್ತು ಹನ್ನೆರಡು ವರ್ಷ ವಯಸ್ಸಿನವರಬೇಕಾದರೇ ಕ್ಷಾಮದ ಕಾಲದಲ್ಲಿನ ಶ್ರೀಗುರುಗಳ ಮಹಾ ಔದಾರ್ಯವನ್ನು ಕಂಡಿರುತ್ತಾರೆ. ಅವರಿಗೆ ಹದಿನೇಳು ವರ್ಷ ವಯಸ್ಸಾದಾಗ ಶ್ರೀ ವಿದ್ಯಾಸಿಂಧುತೀರ್ಥರ ನಿರ್ಯಾಣವಾಗುತ್ತದೆ.

ಮನೆಯಲ್ಲಿದ್ದ ಹಿರಿಯರು ಮದುವೆಯ ವಯಸ್ಸು ಎಂದರಿತು ಕಾವೇರಮ್ಮ ಎನ್ನುವ ಸಾಧ್ವಿಯೊಂದಿಗೆ ವಿವಾಹವನ್ನೂ ಮಾಡಿಸುತ್ತಾರೆ.

ಶ್ರೀ ವಿದ್ಯಾಸಿಂಧುತೀರ್ಥರ ಮಂತ್ರಾಕ್ಷತೆ ಮತ್ತು ಅನುಗ್ರಹದ ಫಲವಾಗಿ ಆ ಕಾವೇರಮ್ಮ ಇವರ ಜೀವನವನ್ನು ಪ್ರವೇಶಿಸುತ್ತಾರೆ. ಆ ಹೆಣ್ಣುಮಗಳು ಮದುವೆಗಿಂತ ಮುಂಚೆ ಒಮ್ಮೆ ಮನೆಯ ಹಿತ್ತಲಿನಲ್ಲಿ ಪಾತ್ರೆ ತೊಳೆಯುವ ಸಂದರ್ಭದಲ್ಲಿ ವಿಚಿತ್ರವಾದ ಬೆಳಕು ಬರುತ್ತದೆ. ಇದೇನೋ ಮಿಂಚು ಅಂದುಕೊಂಡು ಸುಮ್ಮನಾಗುತ್ತಾರೆ. ಆದರೆ ಆ ಪ್ರಕಾಶ ಕಡಿಮೆ ಆಗುವದಿಲ್ಲ. ಇದೇನಿದು ವಿಚಿತ್ರ ಎಂದು ತಲೆಯೆತ್ತಿ ನೋಡಿದರೆ ಅವರಿಗೆ ಆಗಸದಲ್ಲಿಯೇ ಮಹಾಲಕ್ಷ್ಮೀದೇವಿಯ ದರ್ಶನವಾಗಿರುತ್ತದೆ. ಅಂತಹ ದೈವಾನುಗ್ರಹಪಾತ್ರೆಯಾದ ಕಾವೇರಮ್ಮ ಶ್ರೀ ಪಟ್ಟಾಭಿರಾಮಾಚಾರ್ಯರ ಮಡದಿಯಾಗಿ ಬರುತ್ತಾರೆ.

ಮದುವೆಯಾಗಿದೆ, ದುಡಿಯಬೇಕು ಜೀವನ ನಡೆಸಬೇಕು ಎಂದು ಗರ್ಗೇಶ್ವರಿಯ ಬಳಿಯಲ್ಲಿ ಅರ್ಧ ಎಕರೆ ಜಮೀನನ್ನು ರೈತನೊಬ್ಬನಿಂದ ಗುತ್ತಿಗೆಗೆ ಪಡೆಯುತ್ತಾರೆ. ಅಕ್ಕಿ ಬೆಳೆದುಕೊಳ್ಳಲು ಗುತ್ತಿಗೆಗೆ ಅರ್ಧ ಎಕರೆ ಜಮೀನು ಪಡೆದಿದ್ದ ಪಟ್ಟಾಭಿರಾಮಾಚಾರ್ಯರು ಕೆಲವೇ ವರ್ಷಗಳಲ್ಲಿ

180 ಎಕರೆಗಳ ಜಮೀನ್ದಾರರಾಗುತ್ತಾರೆ. ಮೈಸೂರಿನ ದೇವರಾಜಮೊಹಲ್ಲಾದ ಪ್ರತಿಷ್ಠಿತ ಪ್ರದೇಶದದಲ್ಲಿ ಭವ್ಯವಾದ ಮನೆಯನ್ನು ಕಟ್ಟಿಸುತ್ತಾರೆ. ಏನೂ ಇಲ್ಲದವರು ಗುರ್ವನುಗ್ರಹದ ಫಲವಾಗಿ ರಾಜರಂತೆ ಬಾಳಲು ಆರಂಭಿಸುತ್ತಾರೆ.

ಮನೆಯನ್ನು ಕಟ್ಟಿಸಿದ ಹೊಸತರಲ್ಲಿ ಮತ್ತೊಂದು ಅನುಗ್ರಹದ ಘಟನೆ ನಡೆಯುತ್ತದೆ. ಶ್ರೀ ಜಗನ್ನಾಥತೀರ್ಥಶ್ರೀಪಾದರು ಪೂಜೆ ಮಾಡುತ್ತಿದ್ದ ದಿವ್ಯಸನ್ನಿಧಾನದ ಹಯವದನ ಪ್ರತಿಮೆ ಶ್ರೀಮಠದ ಶಿಷ್ಯರ ಮನೆಯಲ್ಲಿ ಇರುತ್ತದೆ. ಅವರ ಕನಸಿನಲ್ಲಿ ಹಯವದನದೇವರು ಕಾಣಿಸಿಕೊಂಡು ನನ್ನನ್ನು ಪಟ್ಟಾಭಿರಾಮಾಚಾರ್ಯರ ಮನೆಗೆ ಕಳುಹಿಸು ಎಂದು ಆದೇಶಿಸುತ್ತಾನೆ. ಪಟ್ಟಾಭಿರಾಮಾಚಾರ್ಯರ ಕನಸಿನಲ್ಲಿಯೂ ಕಾಣಿಸಿಕೊಂಡು ನಿನ್ನ ಮನೆಗೆ ಬರುತ್ತೇನೆ, ಪ್ರತೀದಿವಸ ಹತ್ತು ಸೇರು ಅನ್ನವನ್ನು ನೈವೇದ್ಯ ಮಾಡು ಎಂದು ಆದೇಶಿಸುತ್ತಾನೆ. ಆ ಹಯಗ್ರೀವ ಪ್ರತಿಮೆ ಬಂದಂದಿನಿಂದ ಅವರ ಮನೆಯಲ್ಲಿ ಕನಿಷ್ಠ ಹತ್ತು ಸೇರಕ್ಕಿಗೆ ಕಡಿಮೆ ಯಾವತ್ತೂ ಅಡಿಗೆ

ಮಾಡಿಲ್ಲ. ನೂರಾರು ಜನರ ಊಟದಿಂದ ಪ್ರತೀನಿತ್ಯ ಮನೆಯಲ್ಲಿ ಹಬ್ಬದ ವಾತಾವರಣ.

ಇವತ್ತಿಗೂ ಆ ಪ್ರತಿಮೆ ಅದೇ ದೇವರ ಮನೆಯಲ್ಲಿದೆ. ಶ್ರೀ ಪಟ್ಟಾಭಿರಾಮಾಚಾರ್ಯರು ಸುಧಾ ವ್ಯಾಸತ್ರಯಗಳನ್ನು ಓದಿದವರು ಮಾತ್ರ ಆ ಪ್ರತಿಮೆಯ ಪೂಜೆ ಮಾಡಬೇಕು. ಇಲ್ಲದಿದ್ದರೆ, ಪೂಜೆಯನ್ನೇ ಮಾಡಬೇಡಿ ಎಂದು ಆದೇಶಿಸಿದ್ದಾರೆ. ಹೀಗಾಗಿ ಆ ಪ್ರತಿಮೆ ವರ್ಷದ ಬಹುತೇಕ ಸಂದರ್ಭಗಳಲ್ಲಿ ಪೆಟ್ಟಿಗೆಯಲ್ಲಿಯೇ ಇರುತ್ತದೆ. ಆದರೆ ಆ ದೇವರ ಮನೆಗೆ ಹೋದರೆ ಒಂದು ದೇವಸ್ಥಾನಕ್ಕೆ ಹೋದ ಅನುಭವವಾಗತ್ತದೆ. ಅಷ್ಟು ಜಾಗೃತಸನ್ನಿಧಾನವಿರುವ ಪ್ರತಿಮೆ.

ಹೀಗೆ, ಶ್ರೀ ವಿದ್ಯಾಸಿಂಧುತೀರ್ಥರು ತಮ್ಮ ಪೂರ್ವಾಶ್ರಮದವರಿಗೆ ಮಠದಿಂದ ಬಿಡಿಗಾಸನ್ನೂ ನೀಡಲಿಲ್ಲ. ಆದರೆ, ತಮ್ಮ ಮಂತ್ರಾಕ್ಷತೆಯ ಮುಖಾಂತರ ಅನುಗ್ರಹಿಸಿದರು. ಆ ಬಲದಿಂದ ಪಟ್ಟಾಭಿರಾಮಾಚಾರ್ಯರು ಪಟ್ಟದಲ್ಲಿ ಕುಳಿತ ರಾಜರಂತೆಯೇ ಮೆರೆದರು. ವಿದ್ಯಾವಂತರಾಗಿ,

ಧರ್ಮನಿಷ್ಠರಾಗಿ, ನೂರಾರು ಜನ ವೈದಿಕರಿಗೆ ಆಶ್ರಯದಾತರಾಗಿ ಬಾಳಿದರು.

ಶ್ರೀಸಿಂಧುತೀರ್ಥರ ಮಾಹಾತ್ಮ್ಯವನ್ನು, ಕಾರುಣ್ಯವನ್ನು ಇವತ್ತಿಗೂ ಅವರ ಮನೆತನದವರು ಭಾವುಕರಾಗಿ ನೆನೆಸಿಕೊಳ್ಳುತ್ತಾರೆ. ಸೋಸಲೆಯಲ್ಲಿರುವ ಶ್ರೀಗುರುಗಳ ವೃಂದಾವನಕ್ಕೆ ತಪ್ಪದೇ ಸೇವೆ ಸಲ್ಲಿಸುತ್ತಿರುತ್ತಾರೆ.

ಶ್ರೀಮಠದ ಇಂದಿನ ಪರಿಸ್ಥಿತಿಯನ್ನು ಕಂಡು ಕಣ್ಣೀರಿಡುತ್ತಾರೆ. ಮಠದ ವೈಭವ, ಅದರಲ್ಲಿಯೂ ಶ್ರೀ ವಿದ್ಯಾಪ್ರಸನ್ನತೀರ್ಥರಕಾಲದ ವೈಭವ ಮತ್ತೆ ಮರುಕಳಿಸಬೇಕು ಎಂದು ಅನವರತ ದೇವರನ್ನು ಪ್ರಾರ್ಥಿಸುತ್ತಿದ್ದಾರೆ.

ತಮ್ಮ ಮನೆಯ ಯಾವುದೇ ಸಮಸ್ಯೆಗೂ ಇವರು ಮೊರೆ ಹೋಗುವದು ಶ್ರೀವಿದ್ಯಾಸಿಂಧು-ತೀರ್ಥಶ್ರೀಪಾದರನ್ನು.  ತಾವಷ್ಟೇ ಅಲ್ಲ ತಮ್ಮ ಪರಿಚಯದವರನ್ನೂ ಕರೆತಂದು ಸೇವೆ ಮಾಡಿಸುತ್ತಾರೆ. ಸುಮಾರು ಹತ್ತು ವರ್ಷಗಳಿಂದ ಮಕ್ಕಳಾಗದೇ ಇದ್ದ, ಬ್ರಾಹ್ಮಣರೂ ಅಲ್ಲದ,

ಮುಂಬಯಿಯಲ್ಲಿನ ತಮ್ಮ ಸಜ್ಜನ ಸ್ನೇಹಿತರೊಬ್ಬರನ್ನು ಕರೆದುಕೊಂಡು ಹೋಗಿ ಈ ಮನೆತನದವರು ಶ್ರೀಗುರುಗಳಿಗೆ ಪಂಚಾಮೃತದ ಸೇವೆಯನ್ನು ಮಾಡಿಸಿದ್ದಾರೆ. ಅದಾದ ಹತ್ತು ತಿಂಗಳಲ್ಲಿ ಹೆಣ್ಣುಮಗು ಹುಟ್ಟಿದೆ. ಉತ್ತರ ಭಾರತದ ಆ ಸಜ್ಜನರು ತಮ್ಮ ಮಗಳಿಗೆ ಸಿಂಧು ಎಂದೇ ಹೆಸರನ್ನಿಟ್ಟಿದ್ದಾರೆ. ಇದೊಂದೇ ಅಲ್ಲ ಇವತ್ತಿಗೂ ಸೋಸಲೆಗೆ ಹೋದರೆ ಅಲ್ಲಿನ ಜನ ವಿದ್ಯಾಸಿಂಧುತೀರ್ಥರ ವೃಂದಾವನದ ಮಾಹಾತ್ಮ್ಯವನ್ನು ಹೇಳುತ್ತಾರೆ.

(ಇದೇ ವರ್ಷ ಶ್ರೀ ವಿದ್ಯಾಕಾಂತತೀರ್ಥರ ಆರಾಧನೆಯನ್ನು ಭಕ್ತರೆಲ್ಲ ಸೇರಿ ಮಾಡಿದರು. ಆಗ ತಮಿಳುನಾಡಿನಿಂದ ಬಂದಿದ್ದ ಭಕ್ತರೊಬ್ಬರು ಭಕ್ತಿಯಿಂದ ಶ್ರೀ ವಿದ್ಯಾಕಾಂತತೀರ್ಥರ ವೃಂದಾವನದ ಮುಂದೆ ಕುಳಿತು ವಾಯುಸ್ತುತಿಯನ್ನು ಪಠಿಸಿ ಪ್ರಾರ್ಥಿಸುತ್ತಿದ್ದರು. ಅವರು ಹಿಂದೆ ಕೆಲಸ ಮಾಡುತ್ತಿದ್ದ ಸಂಸ್ಥೆಯಿಂದ ಬರಬೇಕಾದ್ದ ಹಣ ಅನೇಕ ತಿಂಗಳುಗಳಿಂದ ಬಂದಿರಲಿಲ್ಲ. ಗುರ್ವನುಗ್ರಹ ಎಂದರೆ ವಿದ್ಯಾಕಾಂತರ ಆರಾಧನೆ ಮುಗಿಸಿ ಊರಿಗೆ ಹೋಗಿ

ಮಾರನೆಯ ದಿವಸವೇ ಹಣ ಅವರ ಖಾತೆಗೆ ಸಂದಾಯವಾಗಿದೆ. ಶ್ರೀಗುರುಗಳ ಅನುಗ್ರಹವನ್ನು ಕಣ್ಣಾರೆ ಕಂಡ ನಾವೇ ಧನ್ಯರು. )

**ಸಾವಿರ ಕೇಜಿ ಬಂಗಾರವನ್ನು ಸಮಾಜಕ್ಕಾಗಿ ಕೈಯೆತ್ತಿ ನೀಡಿದ ಮಹಾನುಭಾವರು, ತಮ್ಮ ಐದು ವರ್ಷದ ಮಗನಿಗೆ ಮಾತ್ರ ಹಣ ನೀಡಲಿಲ್ಲ. ಮಠದಲ್ಲಿಯೂ ಇರಿಸಿಕೊಳ್ಳಲಿಲ್ಲ. ಸಂನ್ಯಾಸಿಯಾದವರು, ಅದರಲ್ಲಿಯೂ ಶ್ರೀಮದಾಚಾರ್ಯರ ಪರಮಾದ್ಭುತಪೀಠದ ಅಧಿಪತಿಯಾದವರು  ಪೂರ್ವಾಶ್ರಮದೊಂದಿಗೆ ಹೇಗಿರಬೇಕು ಎನ್ನುವದನ್ನು ತೋರಿಸಿಕೊಟ್ಟರು.** ಮಂತ್ರಾಕ್ಷತೆಯ ಮುಖಾಂತರ ಪೂರ್ವಾಶ್ರಮದವರನ್ನು ಅನುಗ್ರಹಿಸಿದರು. ಆದರೆ, ಮಠದ ಹಣ, ಮಠದ ಪಾರುಪತ್ಯ ಯಾವುದನ್ನೂ ನೀಡಲಿಲ್ಲ.

ಇದು ಸಂನ್ಯಾಸಿಗಳಾಗಿರುವ, ಸಂನ್ಯಾಸಿಗಳಾಗಬೇಕಾಗಿರುವ ಮುಖ್ಯವಾಗಿ ಆಚಾರ್ಯರ ಭವ್ಯಪರಂಪರೆಯ ಪೀಠವನ್ನೇರುವ ಪ್ರತಿಯೊಬ್ಬರಿಗೂ ಆದರ್ಶ. ಮಹತ್ತರ ಆದರ್ಶ.

ನಮ್ಮ ಶ್ರೀಮದ್ ವ್ಯಾಸರಾಜಸಂಸ್ಥಾನ ಮತ್ತೆ ಇದೇ ರೀತಿಯ ನಿಸ್ಪೃಹರಾದ, ವಿರಕ್ತರಾದ, ತಪಸ್ವಿಗಳಿಂದ ಅಲಂಕೃತವಾಗಲಿ, ಮುಖ್ಯವಾಗಿ ಪೂರ್ವಾಶ್ರಮದ ಮೇಲೆ ವ್ಯಾಮೋಹ ತೊರೆದ ಮಹನೀಯರು ಈ ಪೀಠವನ್ನೇರಲಿ.  ನಮ್ಮ ವಿದ್ಯಾಮಠದ ವಿದ್ಯಾವೈಭವ ಮತ್ತೆ ವಿಜೃಂಭಿಸಲಿ ಎಂದು ಎಲ್ಲರೂ ಭಕ್ತಿಯಿಂದ ಪ್ರಾರ್ಥಿಸೋಣ. ಅರ್ಥಿಕಲ್ಪಿತಕಲ್ಪರಾದ ಶ್ರೀಮಚ್ಚಂದ್ರಿಕಾಚಾರ್ಯರು ಅನುಗ್ರಹಿಸುತ್ತಾರೆ, ನಮ್ಮ ಪ್ರಾರ್ಥನೆಯನ್ನು ಮನ್ನಿಸುತ್ತಾರೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ



# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, "Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India

nagendracharya@yahoo.co.in

WhatsApp: 9901 551 491